UASB LIBRARY
Newspaper Clippings
Pg .1 Sunday 07-02-2021 Jai Kisan



For more information visit
University Library Website
Web - uasbagrilibindia.org
E-mail- librarian@uasbangalore.edu.in

07-02-2021 Kp Pg 05

ತೋಟಗಾರಿಕಾ ಉತ್ಪಾದನೆಯಲ್ಲಿ ರಾಜ್ಯಕ್ಕೆ 8ನೇ ಸ್ಥಾನ: ಸಚಿವ ಶಂಕರ್

ತೋಟಗಾರಿಕೆ ಬೆಳೆಗಳ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರ ಬದ್ಧ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಾರರ ಸಮಗ್ರ ಅಭಿವೃದ್ಧಿಗಾಗಿ ಬದಲಾದ ಪರಿಸ್ಥಿತಿಗೆ ಅನುಗುಣವಾಗಿ ಹಾಗೂ ಕ್ಷೇತ್ರ ಮಟ್ಟದ ಬೇಡಿಕೆಗಳಿಗೆ ತಕ್ಕಂತೆ ಕಾರ್ಯಕ್ರಮ ರೂಪಿಸಿ ಅನುಷ್ಠಾನಗೊಳಿಸಲು ಬಜೆಟ್‌ನಲ್ಲಿ ಹೆಚ್ಚಿನ ಅನುದಾನ ನೀಡುವಂತೆ ಪ್ರಸ್ತಾವನೆ ಸಲ್ಲಿಸಲಾಗುವುದು ಎಂದು ತೋಟಗಾರಿಕೆ ಮತ್ತು ರೇಷ್ಮೆ ಸಚಿವ ಆರ್.ಶಂಕರ್ ತಿಳಿಸಿದ್ದಾರೆ.


ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಾರರೊಂದಿಗಿನ ಸಂವಾದ ಕಾರ್ಯಕ್ರಮವನ್ನು ಸಚಿವ ಆರ್.ಶಂಕರ್ ಉದ್ಘಾಟಿಸಿದರು.

ಶನಿವಾರ ಜಕಿವಿಕೆ ಸಭಾಂಗಣದಲ್ಲಿ ಆಯೋಜಿಸಿದ್ದ ತೋಟಗಾರಿಕೆ ಮತ್ತು ರೇಷ್ಮೆ ಬೆಳೆಗಾರರೊಂದಿಗಿನ ಸಂವಾದದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ತೋಟಗಾರಿಕಾ ಬೆಳೆಗಳ ವಿಸ್ತೀರ್ಣ 23.25 ಲಕ್ಷ ಹೆಕ್ಟೇರ್ ಇದ್ದು, ವಾರ್ಷಿಕ ಉತ್ಪಾದನೆ 183.46 ಲಕ್ಷ ಮೆಟ್ರಿಕ್ ಟನ್‌ಗಳಷ್ಟಿದೆ. ರಾಷ್ಟ್ರಮಟ್ಟದಲ್ಲಿ ರಾಜ್ಯ ತೋಟಗಾರಿಕೆ ವಿಸ್ತೀರ್ಣದಲ್ಲಿ ಮೊದಲ ಸ್ಥಾನದಲ್ಲಿದ್ದು ಉತ್ಪಾದನೆಯಲ್ಲಿ ಎಂಟನೇ ಸ್ಥಾನವಿದೆ. ತೋಟಗಾರಿಕೆ ಬೆಳೆಗಳ ಸಮಗ್ರ ಅಭಿವೃದ್ಧಿಗಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಹಲವು ಯೋಜನೆಗಳನ್ನು ಕೈಗೊಂಡಿವೆ ಎಂದರು.

ಸಂವಾದ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಹಲವು ರೈತರು, ತೋಟಗಾರಿಕಾ ಬೆಳೆಗಾರರು ಬೆಳೆದಂತ ಉತ್ಪನ್ನಗಳಿಗೆ ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲ. ಹಲವು ಯೋಜನೆಗಳು ಜಾರಿಯಲ್ಲಿದ್ದರೂ ಪ್ರತಿ ಜಿಲ್ಲೆಗೆ ನೀಡಲಾಗುತ್ತಿರುವ ಅನುದಾನ ಹೆಚ್ಚಿಸಬೇಕು. ಬೇಡಿಕೆಗೆ ತಕ್ಕಂತೆ ಅನುದಾನ ಕೊಡಬೇಕು. ಸಬ್ಸಿಡಿ ಹೆಚ್ಚಳ ಮಾಡಬೇಕು. ಹಿರಿತನದ ಆಧಾರದ ಮೇಲೆ ಸಹಾಯಧನ ಹಂಚಿಕೆ ಮಾಡಲು ಕ್ರಮವಹಿಸಬೇಕು ಒತ್ತಾಯಿಸಿದರು. ಮಾವು ನಿಗಮದ ಅಧ್ಯಕ್ಷ ಕೆ.ವಿ.ನಾಗರಾಜ್, ತೋಟಗಾರಿಕೆ ಇಲಾಖೆ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕಠಾರಿಯಾ, ಆಯುಕ್ತೆ ಫೌಜಿಯಾ ತರುನ್ನಂ, 30 ಜಿಲ್ಲೆಗಳ ರೈತರು ಪಾಲ್ಗೊಂಡಿದ್ದರು.

ಕಡಿಮೆ ನೀರಲ್ಲಿ ಸೊಪ್ಪು, ತರಕಾರಿ ಬೆಳೆಯಿರಿ!

ಹೈಡ್ರೋಪೋನಿಕ್ಸ್ ತಂತ್ರಜ್ಞಾನದ ಹೊಸ ಮಾದರಿ ಪರಿಚಯ | ಬೇರಿಗೆ ದಾರ ಕಟ್ಟಿ ನೀರಿಗೆ ಮುಳುಗಿಸಿ ಬೆಳೆ ತೆಗೆವ ಪದ್ಧತಿ

• **ವಿಶೇಷ ವರದಿ**
ಕನ್ನಡಪ್ರಭ ವಾರ್ತೆ ಬೆಂಗಳೂರು

ದೀಪವು ಎಣ್ಣೆಯನ್ನು ಹನಿ ಹನಿಯಾಗಿ ಪಡೆದು ಉರಿಯುವುದು ಎಲ್ಲರಿಗೂ ಗೊತ್ತಿರುವ ವಿಷಯ. ಅದೇ ಮಾದರಿಯಲ್ಲಿ ಅಗತ್ಯ ಬಿದ್ದಾಗ ಮಾತ್ರ ನೀರನ್ನು ಹೀರಿಕೊಂಡು ಸೊಪ್ಪು ಮತ್ತು ತರಕಾರಿ ಬೆಳೆಯಬಹುದಾದ ಹೈಡ್ರೋಪೋನಿಕ್ಸ್ ತಂತ್ರಜ್ಞಾನವನ್ನು ಭಾರತೀಯ ಸಂಶೋಧನಾ ಸಂಸ್ಥೆ(ಐಐಎಚ್‌ಆರ್) ಫೆ.8ರಿಂದ ನಡೆಯುವ ತೋಟಗಾರಿಕಾ ಮೇಳದಲ್ಲಿ ಪ್ರದರ್ಶಿಸಲಿದೆ.

ಫೆ.8ರಿಂದಹೆಸರಘಟ್ಟದ ಐಐಎಚ್‌ಆರ್‌ನ ಆವರಣದಲ್ಲಿ ನಡೆಯಲಿರುವ 'ರಾಷ್ಟ್ರೀಯ ತೋಟಗಾರಿಕಾ ಮೇಳ 2021'ರ ಅಂಗವಾಗಿ ಈ ತಂತ್ರಜ್ಞಾನ ಪರಿಚಯಿಸಿದ್ದು, ರೈತರು ಮತ್ತು ಸಾರ್ವಜನಿಕರಿಗೆ ಪ್ರದರ್ಶನ ಮಾಡಲು ವ್ಯವಸ್ಥೆ ಮಾಡಿದೆ.

ಮಳೆ ನೀರು ಆಶ್ರಿತ ಪ್ರದೇಶಗಳಿಗಾಗಿ ಈ ತಂತ್ರಜ್ಞಾನ ಪರಿಚಯಿಸಲಾಗಿದೆ. ಈ ತಂತ್ರಜ್ಞಾನದಿಂದ ಒಂದು ಹೆಕ್ಟೇರ್ ಪ್ರದೇಶದಲ್ಲಿ ಬೀಳುವ ಸ್ವಲ್ಪವೇ ಮಳೆ ನೀರನ್ನು ಸಂಗ್ರಹಿಸಿ ಒಂದು ವರ್ಷ ಪೂರ್ತಿ ವಿವಿಧ ತರಕಾರಿಗಳನ್ನು ಬೆಳೆಯಬಹುದು. ಅಲ್ಲದೆ, ಇದೇ ನೀರನ್ನು ಪುನರ್ ಬಳಕೆ ಮಾಡುವುದಕ್ಕೂ ಅವಕಾಶವಿದ್ದು ನೀರಿನ ಅಭಾವದ ಸಮಸ್ಯೆ ಕಾಡುವುದಿಲ್ಲ ಎಂದು ಐಐಎಚ್‌ಆರ್‌ನ ಹೂವು ಮತ್ತು ಔಷಧೀಯ ಸಸ್ಯಗಳ ವಿಭಾಗದ ಮುಖ್ಯಸ್ಥ ಡಾ.ಸಿ.ಆಶ್ವತ್ಥ್ ಮಾಹಿತಿ ನೀಡಿದರು.


ಹೆಸರಘಟ್ಟದ ಐಐಎಚ್‌ಆರ್ ಅಭಿವೃದ್ಧಿ ಪಡಿಸಿರುವ ಹೈಡ್ರೋಪೋನಿಕ್ಸ್ ತಂತ್ರಜ್ಞಾನದ ಮಾದರಿ.

ನೂತನವಾಗಿ ಪರಿಚಯಿಸಿರುವ ಹೈಡ್ರೋಪೋನಿಕ್ಸ್ ಪದ್ಧತಿಯಲ್ಲಿ ನೀರಿನ ಮೂಲಕ ಪೌಷ್ಟಿಕಾಂಶಗಳನ್ನು ಕೊಡಲಾಗುತ್ತದೆ. ಇದರಲ್ಲಿ ಯಾವುದೇ ಔಷಧಗಳು ಇರುವುದಿಲ್ಲ. ಮಾನವನ ಆರೋಗ್ಯದ ಮೇಲೆ ಯಾವುದೇ ರೀತಿಯ ಪರಿಹಾರ ಬೀರುವುದಿಲ್ಲ.
• **ಡಾ। ಸಿ.ಆಶ್ವತ್ಥ್**, ಪ್ರಧಾನ ವಿಜ್ಞಾನಿ, ಹೂವು ಮತ್ತು ಔಷಧೀಯ ಸಸ್ಯಗಳ ವಿಭಾಗ

ನೀರಿಗೆ ತಲುಪದ ಬೇರುಗಳು: ಈವರೆಗೂ ಇದ್ದ ಹೈಡ್ರೋಪೋನಿಕ್ಸ್ ಪದ್ಧತಿಯಲ್ಲಿ ಸೊಪ್ಪು ಮತ್ತು ತರಕಾರಿಗಳ ಬೇರುಗಳು ನೀರಿನಲ್ಲಿ ಬೆಳೆಯುತ್ತಿದ್ದವು. ಇದರಿಂದ ಒಂದು ಸಸಿಯ ಬೇರುಗಳು ಮತ್ತೊಂದು ಸಸಿಯೊಂದಿಗೆ ಸುತ್ತಿಕೊಂಡು ಬಿಡಿಸಲು ತೊಂದರೆಯಾಗುತ್ತಿತ್ತು. ಈ ಸಮಸ್ಯೆಗೆ ಪರಿಹಾರವಾಗಿ ಇದೀಗ ನೀರಿನಲ್ಲಿ ಬೇರುಗಳು ಇಳಿಯದಂತಹ ತಂತ್ರಜ್ಞಾನ ಪರಿಚಯಿಸಿದ್ದೇವೆ. ಈ ತಂತ್ರಜ್ಞಾನದಲ್ಲಿ ಪಾಟ್‌ಗಳನ್ನು ಬಳಕೆ ಮಾಡಬಹುದು. ಆದಕ್ಕೆ ಬತ್ತಿಯಂತೆ ಒಂದು ದಾರವನ್ನು ನೀರಿನಲ್ಲಿ ಬಿಡಬೇಕು. ಇದರಿಂದ ಗಿಡಗಳಿಗೆ ಆಗತ್ಯ ವಿದ್ದಲ್ಲಿ ಮಾತ್ರ ನೀರನ್ನು ಪಡೆದು ಬೆಳೆಯಲಿವೆ. ಇದರಿಂದ ಶೇ.80ರಷ್ಟು ನೀರನ್ನು ಕಡಿಮೆ ಬಳಕೆ ಮಾಡಿಕೊಳ್ಳಬಹುದಾಗಿದೆ ಎಂದು ಅವರು ವಿವರಿಸಿದರು.

ತಾರಸಿಗೂ ತಂತ್ರಜ್ಞಾನ

ನಗರ ಭಾಗಗಳಲ್ಲಿ ಮನೆಗಳ ತಾರಸಿಯಲ್ಲಿಯೂ ಈ ತಂತ್ರಜ್ಞಾನ ಬಳಕೆ ಮಾಡಿಕೊಳ್ಳಲು ಅವಕಾಶವಿದೆ. ಕೇವಲ 1/3 ಚದರ ಮೀಟರ್ ಪ್ರದೇಶದಲ್ಲಿ ಐದು ಆಡಿ ಎತ್ತರದ ಸ್ಟ್ಯಾಂಡ್‌ನಲ್ಲಿ ಒಂದು ಕುಟುಂಬಕ್ಕೆ ಆಗತ್ಯವಾದ ತರಕಾರಿಗಳನ್ನು ಬೆಳೆದುಕೊಳ್ಳಬಹುದು ಎಂದು ಅವರು ಹೇಳಿದರು.

ಪಾಲಿಹೌಸ್‌ನಲ್ಲಿ ಉತ್ತಮ ಫಸಲು

ಈ ತಂತ್ರಜ್ಞಾನಕ್ಕೆ ಮಳೆ ನೀರು ಮಾತ್ರ ಸಾಕಾಗಲಿವೆ. ಹೀಗಾಗಿ ಪಾಲಿಹೌಸ್‌ಗಳಲ್ಲಿ ದೊಡ್ಡ ಮಟ್ಟದಲ್ಲಿ ಈ ಪದ್ಧತಿ ಅಳವಡಿಸಿಕೊಳ್ಳಬಹುದಾಗಿದೆ. ಇದರಿಂದ ನೀರಿನ ಆಯಿ ಪ್ರಮಾಣ ಕಡಿಮೆಯಿರಲಿದೆ. ಪಾಲಿಹೌಸ್‌ನ ಮೇಲೆ ಬೀಳುವ ಮಳೆ ನೀರನ್ನೇ ಸಂಗ್ರಹಿಸಿ ಇಡೀ ವರ್ಷ ವಿವಿಧ ತರಕಾರಿ ಮತ್ತು ಸೊಪ್ಪುಗಳನ್ನು ಬೆಳೆಯಲು ಸಾಧ್ಯವಿರಲಿದೆ ಎಂದು ಅವರು ವಿವರಿಸಿದರು.

ನಾಳೆಯಿಂದ ತೋಟಗಾರಿಕಾ ಮೇಳ

12ರವರೆಗೆ ಮೇಳ | ಆನ್‌ಲೈನಲ್ಲಿ ಕೇಂದ್ರ ಕೃಷಿ ಸಚಿವ ತೋಮರ್ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ನಗರದಹೆಸರಘಟ್ಟದಲ್ಲಿರುವಭಾರತೀಯತೋಟಗಾರಿಕೆ ಸಂಶೋಧನಾಸಂಸ್ಥೆ (ಐಐಎಚ್‌ಆರ್) ಯಲ್ಲಿ 'ನವೋದ್ಯಮ ಮತ್ತು ಸದೃಢ ಭಾರತಕ್ಕಾಗಿ ತೋಟಗಾರಿಕೆ' ಶೀರ್ಷಿಕೆಯಡಿ ಫೆ.8ರಿಂದ 12ರವರೆಗೆ 'ತೋಟಗಾರಿಕಾ ಮೇಳ' ನಡೆಯಲಿದೆ.

ಪತ್ರಿಕಾಗೋಷ್ಠಿಯಲ್ಲಿ ಈ ವಿಷಯ ತಿಳಿಸಿದ ಐಐಎಚ್‌ಆರ್‌ನ ನಿರ್ದೇಶಕ ಎಂ.ಆರ್.ದಿನೇಶ್, ಬೀಜೋತ್ಪಾದನೆ, ಸಂಸ್ಕರಿಸಿಂದಸಂಶೋಧಿಸಿದವಿವಿಧತಳಿಗಳು, ತೋಟಗಾರಿಕೆಗೆ ಆಗತ್ಯವಿರುವ ತಂತ್ರಜ್ಞಾನಗಳು, ಯಂತ್ರೋಪಕರಣಗಳು ಮೇಳದಲ್ಲಿ ಪ್ರದರ್ಶನಗೊಳ್ಳಿವೆ ಎಂದರು.

ಮೇಳದಲ್ಲಿ ಸಾಕಷ್ಟು ಖಾಸಗಿ ಕಂಪನಿಗಳು ಕೂಡ ಭಾಗವಹಿಸಲಿದ್ದು, ತೋಟಗಾರಿಕೆಗೆ ಸಂಬಂಧಪಟ್ಟಂತೆ ಅಭಿವೃದ್ಧಿ ಪಡಿಸಿರುವ ತಂತ್ರಜ್ಞಾನಗಳನ್ನು ಪ್ರದರ್ಶನದಲ್ಲಿ ನೋಡಬಹುದಾಗಿದೆ. ತೋಟಗಾರಿಕಾ ಕ್ಷೇತ್ರದಲ್ಲಿ ರೈತ ಉದ್ಯಮಿಯಾಗಲು ಅವಕಾಶವಿದೆ ಎಂಬುದನ್ನು ತಿಳಿಸಲು

- **ತೋಟಗಾರಿಕಾ ಮೇಳಕ್ಕೆ ನೋಂದಣಿ ಮಾಡಿಸಿಕೊಂಡ ರೈತರಿಗಷ್ಟೇ ಪ್ರವೇಶ**
- **ಕೃಷಿ ವಿಜ್ಞಾನಿಗಳ ಜೊತೆ ಸಂವಾದಕ್ಕೆ ರೈತರಿಗೆ ಮುಕ್ತ ಅವಕಾಶ**
- **ತೋಟಗಾರಿಕೆಯನ್ನು ಉದ್ಯಮವಾಗಿ ಉತ್ತೇಜಿಸಲು ವಿಶೇಷ ಆಸಕ್ತಿ**

ಮೇಳ ಆಯೋಜಿಸಲಾಗಿದೆ ಎಂದು ವಿವರಿಸಿದರು.

ಆನ್‌ಲೈನ್‌ನಲ್ಲಿ ಮೇಳ: ಕೊರೋನಾ ಹಿನ್ನೆಲೆಯಲ್ಲಿ ಇದೇ ಮೊದಲ ಬಾರಿ ಆನ್‌ಲೈನ್‌ನಲ್ಲಿ ನಡೆಯಲಿರುವ ತೋಟಗಾರಿಕಾ ಮೇಳವನ್ನು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಉದ್ಘಾಟಿಸಲಿದ್ದಾರೆ. ಮೇಳವನ್ನು ಆಫ್‌ಲೈನ್ ಹಾಗೂ ಆನ್‌ಲೈನ್ ಮೂಲಕ ನೇರ ವೀಕ್ಷಣೆ ಮಾಡಬಹುದಾಗಿದೆ. ಮೇಳಕ್ಕೆ ನೋಂದಣಿ ಮಾಡಿಕೊಂಡಿರುವ ರೈತರಿಗೆ ಮಾತ್ರ ಪ್ರವೇಶಕ್ಕೆ ಅವಕಾಶವಿರಲಿದೆ. ಕೃಷಿ ವಿಜ್ಞಾನಿಗಳ ಜೊತೆಗೆ ಸಂವಹನ ನಡೆಸಲು ವ್ಯವಸ್ಥೆ ಮಾಡಲಾಗಿದೆ ಎಂದು ದಿನೇಶ್ ವಿವರಿಸಿದರು.

ಉದ್ಯಮವಾಗಿ ತೋಟಗಾರಿಕೆ: ಪ್ರಧಾನ ಕೃಷಿ ವಿಜ್ಞಾನಿ ಮತ್ತು ಮೇಳದ ಆಯೋಜನಾ ಕಾರ್ಯದರ್ಶಿ ಡಾ। ಎ.ಎ.ಧನಂಜಯ ಮಾತನಾಡಿ, ಪ್ರಸ್ತ ಆವಧಿಯಲ್ಲಿ ತೋಟಗಾರಿಕೆಯನ್ನು ಉದ್ಯಮವಾಗಿ ಉತ್ತೇಜಿಸಲು ವಿಶೇಷ ಆಸಕ್ತಿ ವಹಿಸಲಾಗಿದೆ. ಆತಿವೃಷ್ಟಿ, ಅನಾವೃಷ್ಟಿಯಿಂದ ಸಂಕಷ್ಟದಲ್ಲಿರುವ ರೈತರಿಗೆ ನೆರವಾಗಲು ತೋಟಗಾರಿಕೆಯನ್ನು ಒಂದು ಉದ್ಯಮವಾಗಿ ಸ್ವೀಕರಿಸಲು ಮೇಳದಲ್ಲಿ ಸಲಹೆ-ಸಹಕಾರ ನೀಡಲಾಗುವುದು ಎಂದರು.

ಸಮಗ್ರ ತೋಟಗಾರಿಕೆ ಬೆಳೆ ಪದ್ಧತಿ: ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿ ಡಾ। ಆಶ್ವತ್ಥ್ ಮಾತನಾಡಿ, ಮಿಶ್ರ ಬೆಳೆಗಳನ್ನು ಬೆಳೆಯುವ ಮೂಲಕ ಕೃಷಿಯಲ್ಲಿನ ಲಾಭದ ಪ್ರಮಾಣವನ್ನು ದ್ವಿಗುಣವನ್ನಾಗಿ ಮಾಡುವ ಕುರಿತು ಮೇಳದಲ್ಲಿ ರೈತರಿಗೆ ಮಾಹಿತಿ ನೀಡಲಾಗುವುದು ಎಂದರು. ಐಐಎಚ್‌ಆರ್‌ನ ಪ್ರಧಾನ ವಿಜ್ಞಾನಿ ನಾರಾಯಣಸ್ವಾಮಿ ಮತ್ತಿತರರಿದ್ದರು.

ಕೃಷಿ ಪದವಿ ಕೌನ್ಸೆಲಿಂಗ್: 370 ಸೀಟುಗಳು ಭರ್ತಿ

ಬೆಂಗಳೂರು: ರಾಜ್ಯದ ಕೃಷಿ ಸಂಬಂಧಿ ವಿಶ್ವವಿದ್ಯಾಲಯಗಳಲ್ಲಿ ಖಾಲಿ ಉಳಿದ ಕೆಸಿಇಟಿ 357 ಸೀಟುಗಳ ಪ್ರವೇಶಾತಿಗಾಗಿ ನಡೆದ ಕೌನ್ಸೆಲಿಂಗ್‌ನಲ್ಲಿ 350 ಸೀಟುಗಳನ್ನು ಭರ್ತಿ ಮಾಡಲಾಗಿದೆ.

ಬೆಂಗಳೂರು ಕೃಷಿ ವಿವಿ ಆವರಣದ ಡಾ. ಬಾಬು ರಾಜೇಂದ್ರ ಪ್ರಸಾದ್ ಅಂತಾರಾಷ್ಟ್ರೀಯ ಸಭಾಂಗಣದಲ್ಲಿ ಕೌನ್ಸೆಲಿಂಗ್ ನಡೆದಿದ್ದು ಶನಿವಾರ ರಾತ್ರಿ 9.30ಕ್ಕೆ ಅಂತ್ಯಗೊಂಡಿತು. ಕೆಸಿಇಟಿ ರ‍್ಯಾಂಕ್ ವಿಜೇತ 350 ವಿದ್ಯಾರ್ಥಿಗಳು ಪ್ರವೇಶ ಪಡೆದುಕೊಂಡಿದ್ದು, 7 ಸೀಟುಗಳಿಗೆ ಯಾವುದೇ ಅಭ್ಯರ್ಥಿ ಲಭ್ಯವಾಗಲಿಲ್ಲ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕೆಸಿಇಟಿ ಪರೀಕ್ಷೆಯಲ್ಲಿ ರ‍್ಯಾಂಕ್ ವಿಜೇತರಾದ ಸುಮಾರು 3 ಸಾವಿರ ವಿದ್ಯಾರ್ಥಿಗಳು ಕೌನ್ಸೆಲಿಂಗ್‌ನಲ್ಲಿ ಪಾಲ್ಗೊಂಡಿದ್ದರು. ಮೊದಲ ದಿನವಾದ ಶುಕ್ರವಾರ ಬೆಳಗ್ಗೆ 10ಕ್ಕೆ ಆರಂಭಗೊಂಡ ಕೌನ್ಸೆಲಿಂಗ್ ಶನಿವಾರ ಬೆಳಗ್ಗೆ 6ರ ವರೆಗೆ ನಿರಂತರವಾಗಿ ನಡೆಯಿತು. ನಂತರ ಪುನಃ ಬೆಳಗ್ಗೆ 9ಕ್ಕೆ ಆರಂಭಗೊಂಡು ರಾತ್ರಿ 9.30ಕ್ಕೆ ಮುಕ್ತಾಯವಾಯಿತು.

ಭಾನುವಾರ (ಫೆ.7) ರಂದು ಬೆಳಗ್ಗೆ 10ಕ್ಕೆ ಐಸಿಎಆರ್‌ನ 110 ಸೀಟುಗಳ ಪ್ರವೇಶಾತಿಗಾಗಿ ಕೌನ್ಸೆಲಿಂಗ್ ನಡೆಯಲಿದೆ. ಸುಮಾರು 450 ಅಭ್ಯರ್ಥಿಗಳು ಕೌನ್ಸೆಲಿಂಗ್‌ನಲ್ಲಿ ಪಾಲ್ಗೊಳ್ಳಲಿದ್ದಾರೆ. ಸಂಜೆ 5 ಗಂಟೆಗೆ ಕೌನ್ಸೆಲಿಂಗ್ ಪ್ರಕ್ರಿಯೆ ಪೂರ್ಣಗೊಳ್ಳಲಿದೆ ಎಂದು ಅಧಿಕಾರಿಗಳು 'ಕನ್ನಡಪ್ರಭ'ಕ್ಕೆ ಮಾಹಿತಿ ನೀಡಿದ್ದಾರೆ.

UASB LIBRARY
Newspaper Clippings
Pg .2 Sunday 07-02-2021 Jai Kisan



ಕೃಷಿ ಆದಾಯಕ್ಕೂ ತೆರಿಗೆ ವಿಧಿಸಿ...

ಹಸಿರು ಹೊನ್ನು
ಯುಂಜುನ್‌ವಾಲಾ
skeditorblr@gmail.com

ಕೃಷಿಗೆ ಆದಾಯ ತೆರಿಗೆ ವಿಧಿಸುವ ಬಗ್ಗೆ ಈಗಲೂ ಜಿಜ್ಞಾಸೆಯಿದೆ. ಭಾರತದಲ್ಲಂತೂ ಕೃಷಿ ಆದಾಯಗಳ ಮೇಲೆ ಆದಾಯ ತೆರಿಗೆ ಪಾವತಿಸಬೇಕಾಗಿಲ್ಲ. ಆದೇನೇ ಇರಲಿ, ಕೃಷಿಗೆ ಆದಾಯ ತೆರಿಗೆ ವಿಧಿಸುವುದು ಪ್ರಗತಿಪರ ಕ್ರಮವೆಂದೇ ಹೇಳಬಹುದು. 2018ರಿಂದಲೂ ಕೀನ್ಯಾದಲ್ಲಿ ಇತರೆ ತೆರಿಗೆದಾರರಂತೆಯೇ ಕೃಷಿ ಕೂಡ ಆದಾಯ ತೆರಿಗೆಗೊಳಪಟ್ಟಿದೆ ಎಂದು ವಿಶ್ವಸಂಸ್ಥೆಯ ಅಭಿವೃದ್ಧಿ ಕಾರ್ಯಕ್ರಮ (ಯುಎನ್‌ಡಿಪಿ) ಕಂಡುಕೊಂಡಿದೆ. ಹಾಗೆಯೇ ಕ್ಯಾಮರೂನ್‌ನಲ್ಲಿ ಕೃಷಿಯು ಆದಾಯ ತೆರಿಗೆಗೆ ಒಳಪಟ್ಟಿದೆಯಾದರೂ ವಾಸ್ತವವಾಗಿ ಸಂಗ್ರಹಿಸಲಾಗಿಲ್ಲ. ಪಾಕಿಸ್ತಾನದಲ್ಲಿ 1997ರಲ್ಲೇ ಕೃಷಿ ಆದಾಯ ತೆರಿಗೆ ಕಾಯ್ದೆ ಜಾರಿಗೊಳಿಸಿ ಕೃಷಿಯಿಂದಲೂ ಆದಾಯ ತೆರಿಗೆ ಸಂಗ್ರಹಿಸುವುದಕ್ಕೆ ರಾಜ್ಯಗಳಿಗೆ ಅಧಿಕಾರ ನೀಡಲಾಗಿದೆ. ಪಂಜಾಬ್‌ನಲ್ಲಿ 12.5 ಎಕರೆಗಿಂತ ಹೆಚ್ಚು ಭೂಮಿ ಹೊಂದಿರುವ ಇಲ್ಲವೇ ಪಾಕಿಸ್ತಾನದ 80 ಸಾವಿರ ರೂ.ಗಿಂತ ಹೆಚ್ಚು ಅಥವಾ ಭಾರತದ 37 ಸಾವಿರ ರೂ.ಗಳಷ್ಟು ಆದಾಯ ಗಳಿಸಿದರೆ ಆದಾಯ ತೆರಿಗೆ ಪಾವತಿಸಬೇಕಾಗುತ್ತದೆ.

ಭಾರತದಲ್ಲಿ ಕೃಷಿಗೆ ಆದಾಯ ತೆರಿಗೆ ವಿನಾಯ್ತಿ ಇರುವುದರಿಂದ 2013–14ರಲ್ಲಿ ಕಾವೇರಿ ಸೀಡ್ಸ್ ಕೃಷಿ ಆದಾಯದ 186 ಕೋಟಿ ರೂ. ಹಾಗೂ ಮೊನ್ಸಾಂಟೊ ಇಂಡಿಯಾ 94 ಕೋಟಿ ರೂ.ಗಳ ವಿನಾಯ್ತಿ ಪಡೆದುಕೊಂಡವು. ಆಹಾರಧಾನ್ಯ ಬೆಳೆಗಾರರಿಂದ ಕೂಡ ಈ ವಿನಾಯ್ತಿ ಪಡೆದುಕೊಂಡರೂ ದೇಶದಲ್ಲಿ ಆಹಾರ ಭದ್ರತೆ ಸಾಧಿಸಲಾಗುವುದಿಲ್ಲ. ಏಕೆಂದರೆ ಆಹಾರಧಾನ್ಯಗಳನ್ನು ಬೆಳೆದು ದೇಶದ ಆಹಾರ ಭದ್ರತೆಯನ್ನು ಸ್ಥಾಪಿಸಿದ ಬಳಿಕ ರೈತನು ಗಳಿಸಿದ ಆದಾಯದಿಂದ ಆದಾಯ ತೆರಿಗೆ ಸಂಗ್ರಹಿಸಲಾಗುತ್ತದೆ. ಆದಾಯದ ಲಭ್ಯತೆಯಿಂದಾಗಿ ಆದಾಯ ತೆರಿಗೆ ಸಂಗ್ರಹಿಸುವುದರಿಂದ ದೇಶದ ಆರ್ಥಿಕ ಅಭಿವೃದ್ಧಿ ಕೂಡ ಮುನ್ನಡೆಯುತ್ತದೆ. ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಪಬ್ಲಿಕ್ ಫೈನಾನ್ಸ್ ಆ್ಯಂಡ್ ಪಾಲಿಸಿ ಕೈಗೊಂಡ ಅಧ್ಯಯನ ಪ್ರಕಾರ, ನಾವು ಕೃಷಿ ಆದಾಯ ತೆರಿಗೆಯಿಂದ ವರ್ಷಕ್ಕೆ ನಮ್ಮ ಜಿಡಿಪಿಯ ಶೇ. 1.2ರಷ್ಟು ಅಥವಾ 3 ಲಕ್ಷ ಕೋಟಿ ರೂ. ಸಂಗ್ರಹಿಸುವ ಸಾಮರ್ಥ್ಯ ಹೊಂದಿದ್ದೇವೆ. ಇದು ಸಾಮಾಜಿಕ ನ್ಯಾಯವನ್ನು ಸಾಧಿಸಲು ಸಹ ಸಹಕಾರಿಯಾಗುತ್ತದೆ, ಏಕೆಂದರೆ ದೊಡ್ಡ ರೈತರಿಂದ ಸಂಗ್ರಹಿಸಿದ ತೆರಿಗೆಯನ್ನು ಬಡವರಿಗೆ ಸಬ್ಸಿಡಿಯಲ್ಲಿ ಆಹಾರಧಾನ್ಯಗಳನ್ನು ನೀಡುವಂತಹ ಪ್ರಯೋಜನಗಳನ್ನು ಕಲ್ಪಿಸಲು ಬಳಸಬಹುದು. ಉದಾಹರಣೆಗೆ, 3 ಲಕ್ಷ ಕೋಟಿ ರೂ.ಗಳ ಈ ಆದಾಯವು ಎಲ್ಲ ನಾಗರಿಕರಿಗೆ ವರ್ಷಕ್ಕೆ ಒಬ್ಬರಿಗೆ ತಲಾ 2,200 ರೂ.ಗಳ ನೇರ ವರ್ಗಾವಣೆ ಮಾಡುವುದಕ್ಕೆ ಸಾಕಾಗುತ್ತದೆ. ಆದ್ದರಿಂದ ನಿಗದಿತ ಮಿತಿಗಳನ್ನು ಮೀರಿ ಭೂಮಿ ಅಥವಾ ಆದಾಯ ಹೊಂದಿರುವ ರೈತರನ್ನು ಆದಾಯ ತೆರಿಗೆಗೊಳಪಡಿಸಬೇಕೆಂಬುದು ನನ್ನ ಅಭಿಪ್ರಾಯ.

ಘಾನಾ ದೇಶ ಕೋಕೋ'ದಿಂದ ರಫ್ತು ತೆರಿಗೆ ಸಂಗ್ರಹಿಸುತ್ತದೆಂದು ಯುಎನ್‌ಡಿಪಿ ಹೇಳಿದೆ. ಅಲ್ಲಿ ಕೋಕೋ'ದ ದೇಶೀಯ ಮತ್ತು ಅಂತಾರಾಷ್ಟ್ರೀಯ ಬೆಲೆಯ ನಡುವಿನ ವ್ಯತ್ಯಾಸಕ್ಕೆ ತೆರಿಗೆಯ ಪ್ರಮಾಣವನ್ನು ಸರಿದೂಗಿಸಲಾಗುತ್ತದೆ. ಇದು ಸರ್ಕಾರಕ್ಕೆ ಆದಾಯ ತಂದುಕೊಡುತ್ತದೆ. ಅಂತಹ ತೆರಿಗೆಗಳು ಸಾಮಾಜಿಕ ನ್ಯಾಯಕ್ಕೂ ಕಾರಣವಾಗುತ್ತವೆ.

ರಫ್ತು ತೆರಿಗೆ ಇಲ್ಲದಿರುವಾಗ ರಫ್ತು ಮಾಡುವ ಬೆಳೆ ರಫ್ತು ತೆರಿಗೆ ವಿಧಿಸಿದ ನಂತರ ತನ್ನದೇ ದೇಶದ ನಾಗರಿಕರಿಗೆ ಲಭ್ಯವಾಗುತ್ತದೆ. ನಮ್ಮ ನೀರು ಮತ್ತು ಮಣ್ಣಿನ ಸಂರಕ್ಷಣೆಯಿಂದಾಗಿ ಆಹಾರ ಭದ್ರತೆ ವೃದ್ಧಿಯಾಗುತ್ತದೆ. ರಫ್ತು ತೆರಿಗೆ ಸರ್ಕಾರಕ್ಕೆ ಹೆಚ್ಚಿನ ಆದಾಯ ತಂದುಕೊಡುತ್ತದೆ, ಆದರೆ ಕಡಿಮೆ ವಿದೇಶಿ ವಿನಿಮಯ ಗಳಿಕೆಯಿಂದಾಗಿ ಈ ಪ್ರಯೋಜನ ಇಲ್ಲದಂತಾಗುತ್ತದೆ. ಎರಡು ವಿರೋಧಾಭಾಸದ ಪರಿಣಾಮಗಳ ಮಿಶ್ರ ಪ್ರಭಾವವು ನಗಣ್ಯವಾಗಬಹುದು. ಆದ್ದರಿಂದ, ರಫ್ತು ತೆರಿಗೆಯು ಸಾಮಾಜಿಕ ನ್ಯಾಯ, ಆಹಾರ ಭದ್ರತೆಯನ್ನು ಸ್ಥಾಪಿಸುತ್ತದಲ್ಲದೇ ಆರ್ಥಿಕ ಬೆಳವಣಿಗೆಯ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ.

ಕೀನ್ಯಾ ಕೃಷಿ ಸಬ್ಸಿಡಿಗಳನ್ನು ತೆಗೆದುಹಾಕಲು ಆರಂಭಿಸಿದೆಯಲ್ಲದೇ ಇತರೆ ಅಭಿವೃದ್ಧಿ ಹೊಂದುತ್ತಿರುವ ದೇಶಗಳು ಅದೇ ದಿಕ್ಕಿನಲ್ಲಿ ಸಾಗಿವೆ. ನಾವು ರಸಗೊಬ್ಬರ, ನೀರು, ವಿದ್ಯುತ್ ಮತ್ತು ಇತರೆ ಸಬ್ಸಿಡಿಗಳಿಗಾಗಿ ಪ್ರತಿ ವರ್ಷ ನಮ್ಮ ಜಿಡಿಪಿ'ಯ ಸುಮಾರು ಶೇ. 2 ಅಥವಾ 6 ಲಕ್ಷ ಕೋಟಿ ರೂ.ಗಳನ್ನು ಒದಗಿಸುತ್ತಿದ್ದೇವೆ. ಸಾಮಾಜಿಕ ನ್ಯಾಯ ಸ್ಥಾಪಿಸುವಲ್ಲಿ ಈ ಸಬ್ಸಿಡಿಗಳು ನೆರವಾಗುತ್ತವೆ. ಆಹಾರಧಾನ್ಯಗಳ ಉತ್ಪಾದನಾ ವೆಚ್ಚ ಕಡಿಮೆಯಾಗುತ್ತದೆ.

ಇಂದು ನಾವು ಆಹಾರಧಾನ್ಯಗಳ ಅಧಿಕ ಉತ್ಪಾದನೆ ಹೊಂದಿದ್ದೇವಲ್ಲದೇ ಶೇಖರಣೆಯಲ್ಲಿ ಮತ್ತು ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಯಲ್ಲಿ ರಫ್ತು ಮಾಡುವಲ್ಲಿ ನಾವು ನಷ್ಟ ಅನುಭವಿಸುತ್ತೇವೆ. ಸಬ್ಸಿಡಿಗಳು ಕೂಡ ನಮ್ಮ ಆಹಾರ ಭದ್ರತೆಗೆ ಹಾನಿಯನ್ನುಂಟು ಮಾಡುತ್ತವೆ.

ನಮ್ಮ ರೈತರು ಸಬ್ಸಿಡಿಯಲ್ಲಿ ಸಿಗುವ ಬೀಜ, ರಸಗೊಬ್ಬರಗಳನ್ನು ಅತಿಯಾಗಿ ಬಳಸುತ್ತಾರೆ. ಅವರು ಬಳಸಿದ ನೀರಿನ ಪ್ರಮಾಣಕ್ಕೆ ಅನುಗುಣವಾಗಿ ಹಣ ಪಾವತಿಸಬೇಕಾಗಿಲ್ಲದ ಕಾರಣ ಕಾಲುವೆಗಳು ಮತ್ತು ಕೊಳವೆ ಬಾವಿಗಳಿಂದ ಅತಿಯಾದ ನೀರಾವರಿಗೆ ಜೋತುಬಿದ್ದಿದ್ದಾರೆ. ಇದು ಈ ಸಂಪನ್ಮೂಲಗಳನ್ನು ಅಳಿವಿನತ್ತ ತಳ್ಳುತ್ತಿದೆಯಲ್ಲದೇ ನಮ್ಮ ಆಹಾರ ಸುರಕ್ಷತೆಗೂ ಹೊಡೆತ ಕೊಡುತ್ತದೆ. ಇದೇ ನೀರನ್ನು ಕೈಗಾರಿಕೆಗಳು ಮತ್ತು ಸಾಫ್ಟ್‌ವೇರ್ ಪಾರ್ಕ್‌ಗಳಿಗೆ ಒದಗಿಸಿದರೆ ಹೆಚ್ಚಿನ ಆದಾಯ ತಂದುಕೊಡುತ್ತದೆ. ನಮ್ಮ ಸಂಪನ್ಮೂಲಗಳ ಸಮರ್ಥ ಬಳಕೆಯನ್ನು ಸಾಧಿಸುವುದಕ್ಕೆ ಈ ಸಬ್ಸಿಡಿಗಳನ್ನು ತೆಗೆದುಹಾಕುವುದು ಅವಶ್ಯ.

07-02-2021 Sk Pg 06

ವಿದೇಶಕ್ಕೆ ಹಾಲಿನ ಉತ್ಪನ್ನ ರಫ್ತು

ಸಂ.ಕ.ಸಮಾಚಾರ ಬೆಂಗಳೂರು

ಬೆಂಗಳೂರು ಸಹಕಾರ ಹಾಲು ಒಕ್ಕೂಟ ತನ್ನ ವಹಿವಾಟನ್ನು ಹೆಚ್ಚಿಸಿಕೊಳ್ಳಲು ವಿದೇಶಕ್ಕೆ ಹಾಲಿನ ಉತ್ಪನ್ನಗಳನ್ನು ರಫ್ತು ಮಾಡಲು ತೀರ್ಮಾನಿಸಿದೆ.

ಬಮೂಲ್ ಬೆಂಗಳೂರು ನಗರ, ಬೆಂ.ಗ್ರಾಮಾಂತರ, ರಾಮನಗರ ಜಿಲ್ಲೆಗಳಲ್ಲಿನ ಒಕ್ಕೂಟದ ವ್ಯಾಪ್ತಿಯಲ್ಲಿ 2209 ಪ್ರಾಥಮಿಕ ಹಾಲು ಉತ್ಪಾದಕರ ಸಹಕಾರ ಸಂಘಗಳಿದ್ದು ದಿನಂಪ್ರತಿ ಸರಾಸರಿ 17.2 ಲಕ್ಷ ಲೀಟರ್ ಹಾಲು ಶೇಖರಣೆಯಾಗುತ್ತಿದೆ. ಒಕ್ಕೂಟದ ವ್ಯಾಪ್ತಿಯಲ್ಲಿ 1,24,600 ಹಾಲು ಉತ್ಪಾದಕರು ಪ್ರತಿದಿನ ಸಕ್ರಿಯವಾಗಿ ಹೈನುಗಾರಿಕೆಯಲ್ಲಿ ತೊಡಗಿಸಿಕೊಂಡು ಉತ್ಪಾದಿಸಿದ ಹಾಲನ್ನು ಪ್ರಾಥಮಿಕ ಹಾಲು ಉತ್ಪಾದಕ ಸಹಕಾರ ಸಂಘಗಳ ಮೂಲಕ ಖರೀದಿಸಿ, ಬಿಎಂಸಿಗಳು ಹಾಗೂ ಒಕ್ಕೂಟದ 7 ಶೀತಲ ಕೇಂದ್ರಗಳಾದ ದೊಡ್ಡಬಳ್ಳಾಪುರ, ವಿಜಯಪುರ, ಹೊಸಕೋಟೆ, ಆನೇಕಲ್ ಕನಕಪುರ, ಬೈರಾಪಟ್ಟಣ ಮತ್ತು ಸೋಲೂರುನಿಂದ ಹಾಲನ್ನು ಶೈಥೀಕರಿಸಿಕೊಂಡು ಮೇಗಾ ಡೇರಿ, ಹೊಸಕೋಟೆ ಮತ್ತು ಕನಕಪುರ ಉತ್ಪನ್ನ ಘಟಕಗಳಿಗೆ ಸರಬರಾಜು ಮಾಡಲಾಗುತ್ತಿದೆ.

ಒಕ್ಕೂಟದಿಂದ ಪ್ರತಿ 15 ದಿನಗಳಿಗೊಮ್ಮೆ ಅಂದಾಜು 72 ಕೋಟಿ ರೂ.ಗಳಂತೆ ತಿಂಗಳಿಗೆ 144 ಕೋಟಿ ರೂ.ಗಳನ್ನು ಸಂಘಗಳಿಂದ ಉತ್ಪಾದಕರಿಗೆ ನೇರವಾಗಿ ಪಾವತಿಸಲಾಗುತ್ತಿದೆ. ಒಕ್ಕೂಟದಿಂದ ತಾಂತ್ರಿಕ ಸೌಲಭ್ಯಗಳಿಗೆ ಪ್ರತಿವರ್ಷ 63.50 ಕೋಟಿ ರೂ.ಗಳ ಅನುದಾನ ನೀಡಲಾಗುತ್ತಿದೆ. ಬಮೂಲ್ ಟ್ರಸ್ಟ್ ವತಿಯಿಂದ ಪ್ರತಿ ವರ್ಷ ಸುಮಾರು 10 ಕೋಟಿ ರೂ.ಗಳನ್ನು ಕಲ್ಯಾಣ ಕಾರ್ಯಕ್ರಮಗಳಿಗೆ ನೀಡಲಾಗುತ್ತಿದೆ.

ಮುಂದಿನ ದಿನಗಳಲ್ಲಿ ಒಕ್ಕೂಟದಲ್ಲಿ ತಯಾರಿಸುವ ಉತ್ಪನ್ನಗಳಾದ ಹಾಲಿನ ಪುಡಿ, ವಿವಿದ ಮಾದರಿಯ ಚೀಸ್, ಬೆಣ್ಣೆ ಮತ್ತು ತುಪ್ಪವನ್ನು ಹೊರ ದೇಶಗಳಿಗೆ ಮಾರಾಟ ಮಾಡುವುದರಿಂದ ಒಕ್ಕೂಟವು ಆರ್ಥಿಕ ಸಭಲತೆಯನ್ನು ಹೊಂದಿರುವುದಾಗಿ ಒಕ್ಕೂಟದ ಪದಾಧಿಕಾರಿಗಳು ತಿಳಿಸಿದ್ದಾರೆ.

07-02-2021 Sk Pg 09

ಬ್ಯಾಡಗಿ ಮೆಣಸಿನಕಾಯಿ ಹೊಸ ಉದ್ಯಮಕ್ಕೆ ದಾರಿ

ಹುಬ್ಬಳ್ಳಿ: ಬ್ಯಾಡಗಿ ಮೆಣಸಿನಕಾಯಿ ಗುಣಮಟ್ಟ ಕಂಡು 'ಓಲಿಯೋರಿಸನ್' ಎಂಬ ಹೊಸ ಉದ್ದಿಮೆಯೇ ಆರಂಭವಾಗಿದೆ ಎಂದು ಹುಬ್ಬಳ್ಳಿ ಎಪಿಎಂಸಿ ವ್ಯಾಪಾರಸ್ಥರ ಸಂಘದ ಮಾಜಿ ಅಧ್ಯಕ್ಷ ಜಗದೀಶಗೌಡ ಹೇಳಿದ್ದಾರೆ.



ಓಲಿಯೋರಿಸನ್ ಎಂದರೆ ಮೆಣಸಿನಕಾಯಿಯಲ್ಲಿ ಗಾಢವಾದ ಬಣ್ಣ ಬೇರ್ಪಡಿಸುವುದು, ಖಾರವನ್ನು ಬೇರ್ಪಡಿಸುವುದು. 30 ವರ್ಷಗಳ ಹಿಂದೆ ಇದಕ್ಕೆ ಜಗತ್ತಿನಲ್ಲಿ ಬೇಡಿಕೆ 40 ಟನ್ ಇತ್ತು. ಈಗ 6000 ಟನ್ ಆಗಿದೆ. 8 ವರ್ಷಗಳಿಂದ ಬ್ಯಾಡಗಿ ಮಾರುಕಟ್ಟೆಯಿಂದಲೇ ಹೆಚ್ಚು ಉತ್ಪನ್ನ ಇದಕ್ಕೆ ಪೂರೈಕೆಯಾಗುತ್ತಿತ್ತು. ಈಗ ಬೆಳೆ ಕಡಿಮೆಯಾಗಿ ಚೀನಾ ಆ ಮಾರುಕಟ್ಟೆ ಆಕ್ರಮಿಸಿದೆ ಎಂದು ಹೇಳಿದರು.

ಬ್ಯಾಡಗಿ ಡಬ್ಬಿ ತಳಿಗೆ 'ಜಿ.ಐ'(ಜಿಯೋ ಇಂಡಿಕೇಟರ್ ಲಿಸ್ಟ್) ಟ್ಯಾಗ್ ಲಭಿಸಿದೆ. ಭಾರತದಲ್ಲಿ ಈ ಜಿ.ಐ. ಟ್ಯಾಗ್ ಬ್ಯಾಡಗಿ ಮೆಣಸಿನಕಾಯಿಗೆ ಮಾತ್ರ ಇದೆ ಎಂದು ತಿಳಿಸಿದರು.

ಬ್ಯಾಡಗಿ ಮೆಣಸಿನಕಾಯಿ ಡಬ್ಬಿ ಮತ್ತು ಕಡ್ಡಿ ತಳಿ ಬೀಜಗಳು ಎಂದು ಹೇಳಿ ಕಳಪೆ ಬೀಜಗಳನ್ನು ಹಳ್ಳಿ ಹಳ್ಳಿಗೆ ಹೋಗಿ ವಂಚಕರು ಮಾರಾಟ ಮಾಡಿದ್ದು, ಇವರ ಮೋಸಕ್ಕೆ ಬಲಿಯಾದ ರೈತರು ಕನಿಷ್ಠ ಇಳುವರಿ ಪಡೆದು ನಷ್ಟ ಅನುಭವಿಸುತ್ತಿದ್ದಾರೆ. ಇಂಥ ವಂಚಕರ ಬಗ್ಗೆ ಸರ್ಕಾರ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಅವರು ಹೇಳಿದರು.

07-02-2021 Sk Pg 08